ಬೆಂಗಳೂರು–ಚಾಮರಾಜನಗರದ ನಡುವೆ ಸೂಪರ್ ಡಿಲಕ್ಸ್ ಓಡಿಸಂವ ಬಗ್ಗೆ.

೨೦೪. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು–ಚಾಮರಾಜನಗರದ ನಡುವೆ ಈಗ ಎಷ್ಟು ಸುವಿಹಾರಿ ಮತ್ತು ಸೆಮಿ ಲಕ್ಸುರಿ ಬಸ್ಸುಗಳು ಸಂಚರಿಸುತ್ತಿವೆ. (ಅವು ಎರಡು ಕಡೆಗಳಿಂದ ಯಾವ ವೇಳೆಯಲ್ಲಿ ಹೊರಟಂ ತಲುಪುವ ಬಗ್ಗೆ ವಿವರಗಳನ್ನು ನೀಡುವುದು)?

ಆ) ಈ ಮಾರ್ಗ ಲಾಭದಾಯಕವಾಗಿದೆಯೆ ?

ಇ) ಹಾಗಿದ್ದಲ್ಲಿ ಮೈಸೂರು ಮಾರ್ಗವಾಗಿ ಚಾಮರಾಜನಗರಕ್ಕೆ ಒಂದು ಸುವಿಹಾರಿ ಬಸ್ಸನ್ನು ಓಡಿಸಲಂ ಸರ್ಕಾರ ಯೋಚಿಸಿದೆಯೇ ?

ಈ) ಇಲ್ಲದಿದ್ದಲ್ಲಿ ಕಾರಣಗಳೇನಂ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಬೆಂಗಳೂರು–ಚಾಮರಾಜನಗರದ ನಡುವೆ ಸುವಿಹಾರಿ ಬಸ್ಸುಗಳನ್ನು ಓಡಿಸುತ್ತಿಲ್ಲ. ಐದು (೫) ಸೆಮಿ ಲಕ್ಸುರಿ ಬಸ್ಸುಗಳು ಈ ಕೆಳಗಿನ ಸವಂಯದಲ್ಲಿ ಓಡಿಸಲಾಗುತ್ತಿದೆ.

ಬೆಂಗಳೂರು (ಹೊರಡುವ ವೇಳೆ)
೦೮೩೦, ೧೨೩೦, ೧೮೪೫, ೧೬೦೦, ೦೮೧೫

ಚಾಮರಾಜನಗರ (ತಲುಪುವ ವೇಳೆ)
೧೩೦೦, ೧೭೦೦, ೨೨೪೫, ೨೦೪೫, ೧೨೪೫

ಚಾಮರಾಜನಗರ (ಹೊರಡುವ ವೇಳೆ)
೦೫೩೦, ೧೩೩೦, ೧೭೩೦, ೦೪೦೦, ೧೪೦೦

ಬೆಂಗಳೂರು (ತಲುಪುವ ವೇಳೆ)
೧೯೩೦, ೧೪೦೦, ೨೨೦೦, ೦೪೪೫, ೧೪೩೦

ಆ) ಹೌದು

ಇ) ಈ) ಪ್ರಸ್ತುತ ಆರ್ಥಿಕ ಸಾಲಿನಲ್ಲಿ ಕಡೇ ಪಕ್ಷ ಒಂದು ಸುವಿಹಾರಿ ಬಸ್ಸನ್ನು ಓಡಿಸಲು ಪ್ರಯತ್ನಿಸಲಾಗುವುದು.

ಶ್ರೀ ಎಂ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಅದರ ಬದಲಾಗಿ ಉತ್ತರವನ್ನು ಸದನಕ್ಕೆ ಓದಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ,

ಅಧ್ಯಕ್ಷರು.—ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದರ ಮೇಲೆ ನೀವು ಕೇಳಬೇಕಾದ ಉಪಪ್ರಶ್ನೆಗಳನ್ನು ದಯವಿಟ್ಟು ಕೇಳಿ.

ಶ್ರೀ ಎಂ. ನಾರಾಯಣಸ್ವಾಮಿ.—ಬೆಂಗಳೂರು–ಚಾಮರಾಜನಗರದ ನಡುವಿನ ಮಾರ್ಗ ಲಾಭದಾಯಕವಾಗಿದೆಯೇ ಎಂದು ಕೇಳಿದ್ದಕ್ಕೆ ಸಚಿವರು 'ಹೌದು' ಎಂದು ಉತ್ತರಿಸಿದ್ದಾರೆ. ಆ ಮಾರ್ಗದಲ್ಲಿ ಸುವಿಹಾರಿ ಬಸ್‌ನ್ನು ಓಡಿಸುವುದಕ್ಕೆ ತಮಗೆ ಏನು ತೊಂದರೆ ಇದೆ ಎಂದು ಹೇಳಬೇಕು.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ ಈಗಾಗಲೇ ಮಾನ್ಯ ಸದಸ್ಯರಿಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಈ ಆರ್ಥಿಕ ಸಾಲಿನಲ್ಲಿ ಒಂದು ಸೂಪರ್ ಡಿಲಕ್ಸ್ ಬಸ್‌ನ್ನು ಓಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ.—ಮಾನ್ಯ ಸಚಿವರು ಒಂದು ಸೂಪರ್ ಡಿಲಕ್ಸ್ ಬಸ್‌ನ್ನು ಓಡಿಸುವುದಕ್ಕೆ ಕ್ರಮಕೈಗೊಳ್ಳುವುದಾಗಿ ಹೇಳಿದ್ದಾರೆ. ದಯವಿಟ್ಟು ಆ ಮಾರ್ಗದಲ್ಲಿ ಇನ್ನೂ ಹೆಚ್ಚಿಗೆ ಸೂಪರ್ ಡಿಲಕ್ಸ್ ಬಸ್‌ನ್ನು ಓಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಸದಸ್ಯರ ಸಲಹೆಯನ್ನು ಆದಷ್ಟು ಜಾಗ್ರತೆ ಪರಿಶೀಲಿಸುತ್ತೇನೆ.